ಕರ್ನಾಟಕ ಸರ್ಕಾರ

(ತೋಟಗಾರಿಕೆ ಇಲಾಖೆ)

ಸಂಖ್ಯೆ/ತೋಇ/ಆ/ಸಿ/ವಿನಿ12/01/2016-17

ತೋಟಗಾರಿಕೆ ಆಯುಕ್ತರ ಕಛೇರಿ
ಲಾಲ್ ಬಾಗ್,ಬೆಂಗಳೂರು
ದಿನಾಂಕ:21-11-2017

ಸುತ್ತೋಲೆ

ವಿಷಯ: 2016-17 ನೇ ಸಾಲಿನ ಕಾರ್ಯನಿರ್ವಹಣಾ ವರದಿಗಳನ್ನು ಸಕಾಲದಲ್ಲಿ ಸಲ್ಲಿಸುವ ಬಗ್ಗೆ.

ಉಲ್ಲೇಖ:1)ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಸಿಆಸುಇ 4 ಸೇರವ 2002,ದಿ:29-08-2002,
2) ಈ ಕಛೇರಿ ಸಮಸಂಖ್ಯೆಯ ಸುತ್ತೋಲೆಯ ದಿ:31-03-2017

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ 2016-17 ನೇ ಸಾಲಿನ ನಿಮ್ಮ ಅಧೀನ ಕಛೇರಿಗಳ ಅಧಿಕಾರಿಗಳ/ನೌಕರರ ಕಾರ್ಯನಿರ್ವಹಣಾ ವರದಿಗಳನ್ನು ನಿಗಧಿತ ಅವಧಿಯೊಳಗೆ ಸಲ್ಲಿಸಲು ಉಲ್ಲೇಖ (2) ರ ಈ ಕಛೇರಿಯ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು.ಸದರಿ ಸುತ್ತೋಲೆಯೊಂದಿಗೆ ಸ್ವಯಂ ಮೌಲ್ಯ ಮಾಪನದ ನಿಗದಿತ ನಮೂನೆಯೊಂದಿಗೆ ಸಲ್ಲಿಸಲು ಸಹ ತಿಳಿಸಲಾಗಿತ್ತು. ಹಲವಾರು ಅಧಿಕಾರಿಗಳು ಅವರುಗಳ ಕಾರ್ಯನಿರ್ವಹಣಾ ವರದಿಗಳನ್ನು ಸಲ್ಲಿಸುತ್ತಿದ್ದು, ನಿಗದಿತ ಮೌಲ್ಯ ಮಾಪನದ ನಮೂನೆಯನ್ನು ಸಲ್ಲಿಸಿರುವುದಿಲ್ಲ, ಕೂಡಲೇ ಸಲ್ಲಿಸಲು ಮತ್ತೊಮ್ಮೆ ಸೂಚಿಸಿದೆ.

2016-17 ನೇ ಸಾಲಿನ ಕಾರ್ಯನಿರ್ವಹಣಾ ವರದಿಗಳನ್ನು ಇಲಾಖೆಯ ಅಧಿಕಾರಿ/ನೌಕರರು ವೈಯಕ್ತಿಕ ಮಾಹಿತಿ,ಸ್ವಯಂ ಮೌಲ್ಯಮಾಪನೆ ನೀಡಿರುವ ನಮೂನೆಯಲ್ಲಿ ವರದಿ ಪ್ರಾಧಿಕಾರ ಹಾಗೂ ಪುನರಾವಲೋಕನ ಮಾಡುವ ಪ್ರಾಧಿಕಾರಿಗಳು ನಿಗಧಿತ ಅವಧಿಯಲ್ಲಿ ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳ ಮೂಲಕ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ಮುಂದುವರೆದು 2017-18 ನೇ ಸಾಲಿನ ಕಾರ್ಯನಿರ್ವಹಣಾ ವರದಿಗಳನ್ನು ಸಲ್ಲಿಸಲು ಹೊಸದಾಗಿ ಸ್ವಯಂ ಮೌಲ್ಯ ಮಾಪನದ ನಮೂನೆಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ. ಮುಂದಿನ ಸಾಲಿಗೆ ಸಹಾಯಕ ತೋಟಗಾರಿಕೆ ಅಧಿಕಾರಿ ವೃಂದದಿಂದ ಮೇಲ್ಪಟ್ಟು ಅಪರ ನಿರ್ದೇಶಕರು ವೃಂದದ ಅಧಿಕಾರಿಗಳವರೆಗೆ ಅವರುಗಳ ಕಾರ್ಯನಿರ್ವಹಣಾ ವರದಿಗಳೊಂದಿಗೆ ಸ್ವಯಂ ಮೌಲ್ಯ ಮಾಪನದ ವಿವರಗಳನ್ನು ಸಲ್ಲಿಸತಕ್ಕದ್ದು.

ಈ ಸುತ್ತೋಲೆಯಲ್ಲಿ ಸೂಚಿಸಿರುವ ಅಂಶಗಳನ್ನು ಇಲಾಖೆಯ ಎಲ್ಲಾ ಪ್ರಾಧಿಕಾರಿಗಳು ಪರಿಪಾಲಿಸಬೇಕಾಗಿ ಹಾಗೂ ಕಡ್ಡಾಯವಾಗಿ ಸಂಬಂಧಪಟ್ಟ ಎಲ್ಲಾ ನೌಕರರ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ. ಹಾಗೂ ಪ್ರಸ್ತುತ ಇಲಾಖೆಯಲ್ಲಿಇತ್ತೀಚೆಗೆ ನೇಮಕಾತಿ ಹೊಂದಿರುವ ಪ್ರೊಭೇಷನರಿ ಸಹಾಯಕ ತೋಟಗಾರಿಕೆ ನಿರ್ದೇಶಕರು/ಸಹಾಯಕ ತೋಟಗಾರಿಕೆ ಅಧಿಕಾರಿಗಳು ನೇಮಕಾತಿ ಹೊಂದಿದ ದಿನಾಂಕದಿಂದ 31-03-2017 ರ ಅಂತ್ಯದವರೆಗಿನ ಕಾರ್ಯನಿರ್ವಹಣಾ ವರದಿಯನ್ನು ಏಪ್ರಿಲ್ ಮಾಹೆಯಲ್ಲಿ ತಮ್ಮ ಮೇಲಾಧಿಕಾರಿಗಳ ಮೂಲಕ ತಪ್ಪದೇ ಈ ಕಛೇರಿಗೆ ಸಲ್ಲಿಸತಕ್ಕದ್ದು.

ಪು.ತಿ.ನೋ

ರೈತ ಸಂಪರ್ಕ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ತೋಟಗಾರಿಕೆ ಅಧಿಕಾರಿಗಳಿಗೆ ಈ ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ.

1) **MGNREGA:** ಯೋಜನೆಗೆ ಸಂಬಂಧಿಸಿದಂತೆ ಪ್ರತಿಯೊಂದು ರೈತ ಸಂಪರ್ಕ ಕೇಂದ್ರಗಳಲ್ಲಿ ಕನಿಷ್ಟ 100 ಕಾಮಗಾರಿಗಳು ಹಾಗೂ 10,000 ಮಾನವ ದಿವಸಗಳು, AEP/ ಪುನಃಶ್ಚೇತನ / ಈರುಳ್ಳಿ ಸಂಗ್ರಹಣಾ ಘಟಕ / ಕೊಳವೆ ಬಾವಿಗಳ ಮರು ಪೂರಣ ಘಟಕ / ಕಿಚನ್ ಗಾರ್ಡನ್ ಈ ಎಲ್ಲಾ ಯೋಜನೆಗಳ ಬಗ್ಗೆ ಗುರಿ ಮತ್ತು ಪ್ರಗತಿ ವಿವರಗಳನ್ನು ಸಲ್ಲಿಸಬೇಕು.
2) **ತರಬೇತಿ:** ಪ್ರತಿಯೊಂದು ರೈತ ಸಂಪರ್ಕ ಕೇಂದ್ರಗಳಲ್ಲಿ ಪ್ರತಿ ತಿಂಗಳು 50-60 ರೈತರು ಒಳಗೊಂಡಂತೆ ತರಬೇತಿಯನ್ನು ಕಡ್ಡಾಯವಾಗಿ ಏರ್ಪಡಿಸಬೇಕು. ಈ ತರಬೇತಿಯಲ್ಲಿ GMP/ INM-IPM/ ಹನಿ ನೀರಾವರಿ/ಸಸ್ಯೋತ್ಪಾದನೆ / ವಿತರಣೆ ಹಾಗೂ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡತಕ್ಕದ್ದು.
3) **ವಿಸ್ತರಣೆ:** ಹೊಸಬೆಳೆ/ಹೊಸ ತಾಂತ್ರಿಕತೆ/ Integrated Farming System ನಲ್ಲಿ ಎಷ್ಟು ರೈತರಿಗೆ / ಎಷ್ಟು ಪ್ರದೇಶಗಳಲ್ಲಿ ವಿಸ್ತರಣೆ ಮಾಡಲಾಗಿದೆ ಎಂಬ ಬಗ್ಗೆ ವಿವರ ಸಲ್ಲಿಸುವುದು ಹಾಗೂ Crop Production ಇರುವ ತಾಂತ್ರಿಕತೆ/ಸುರಕ್ಷಿತ ಬೇಸಾಯ ಪದ್ಧತಿ / ಸೂಕ್ಷ್ಮ ನೀರಾವರಿ ಹಾಗೂ Protected Cultivation / Organic Farming ಇತ್ಯಾದಿಗಳ ಬಗ್ಗೆ ಎಷ್ಟು ರೈತರಿಗೆ ಅರಿವು/ತರಬೇತಿ ನೀಡಲಾಗಿದೆ ಎಂಬ ಬಗ್ಗೆ ಮಾಹಿತಿ ಸಲ್ಲಿಸುವುದು.
4) ಇಲಾಖಾ ಕಾರ್ಯಕ್ರಮಗಳಲ್ಲಿ SC/ST ಹಾಗೂ ಬಡ ರೈತರಿಗೆ ಜೀವನೋಪಾಯ ಸುಧಾರಣೆಯ ಬಗ್ಗೆ ಎಷ್ಟು ಕುಟುಂಬಗಳಿಗೆ ಸುಧಾರಣೆ ಮಾಡಲಾಗಿದೆ ಎಂಬ ಬಗ್ಗೆ ಮಾಹಿತಿ ಸಲ್ಲಿಸಬೇಕು.
5) ಬರ ಮತ್ತು ಪ್ರವಾಹಗಳ ಬಗ್ಗೆ ಬೆಳೆ ವಿಮೆ/ ಬೆಳೆ ಸಮೀಕ್ಷೆ/ಬೆಳೆ ಕಟಾವು / ತೋಟಗಾರಿಕೆ ಬೆಳೆಗಳ ಅಂಕಿ ಅಂಶ / ನೀರು ಸಂರಕ್ಷಣೆ /ನೀರು ಕೊಯ್ಲು/ಕಾಮಗಾರಿಗಳ ಬಗ್ಗೆ ಪ್ರಗತಿ ವಿವರ ಸಲ್ಲಿಸುವುದು.

ಮೇಲ್ಕಂಡ ಸೂಚನೆಗಳನ್ನು ರೈತ ಸಂಪರ್ಕ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ತೋಟಗಾರಿಕೆ ಅಧಿಕಾರಿಗಳು 2017-18 ನೇ ಸಾಲಿಗೆ ಕಾರ್ಯ ನಿರ್ವಹಣಾ ವರದಿಗಳನ್ನು ಸಲ್ಲಿಸುವಾಗ ಈ ವಿವರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

**ತೋಟಗಾರಿಕೆ ಅಪರ ನಿರ್ದೇಶಕರು / ವಿಭಾಗೀಯ ಜಂಟಿ ನಿರ್ದೇಶಕರು / ತೋಟಗಾರಿಕೆ ಜಂಟಿ ನಿರ್ದೇಶಕರು/ತೋಟಗಾರಿಕೆ ಉಪ ನಿರ್ದೇಶಕರು/ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿಪಂ/(ರಾವ) ರವರುಗಳ ಕಾರ್ಯನಿರ್ವಹಣಾ ವರದಿ ನಮೂನೆಯಯೊಂದಿಗೆ ಸಲ್ಲಿಸಬೇಕಾದ ಮೌಲ್ಯ ಮಾಪನ ನಮೂನೆಯನ್ನು ಕಾರ್ಯನಿರ್ವಹಣಾ ವರದಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕು ( ನಮೂನೆಯನ್ನು ಈ ಪತ್ರಕ್ಕೆ ಲಗತ್ತಿಸಿದೆ)**

ಪು.ತಿ.ನೋ

ನಿಗದಿತ ನಮೂನೆ ಹಾಗೂ ಮೌಲ್ಯಮಾಪನ ನಮೂನೆಯನ್ನು ಇಲಾಖಾ ವೆಬ್ ಸೈಟ್ ವಿಳಾಸ http://www.horticulture.kar.nic.in ನಲ್ಲಿ ಪಡೆಯಬಹುದಾಗಿದೆ.

ಆಯುಕ್ತರು

ಪ್ರತಿಯನ್ನು:-

1) ಎಲ್ಲಾ ತೋಟಗಾರಿಕೆ ಅಪರ ನಿರ್ದೇಶಕರು,ಲಾಲ್ ಬಾಗ್ ಬೆಂಗಳೂರು
2) ಕಾರ್ಯನಿರ್ವಾಹಕ ನಿರ್ದೇಶಕರು,ರಾಷ್ಟ್ರೀಯ ತೋಟಗಾರಿಕೆ ಮಿಷನ್, ಲಾಲ್ ಬಾಗ್ ಬೆಂಗಳೂರು ರವರಿಗೆ.
3) ಎಲ್ಲಾ ತೋಟಗಾರಿಕೆ ಜಂಟಿ ನಿರ್ದೇಶಕರು,ಲಾಲ್ ಬಾಗ್/ ಹುಳಿಮಾವು ರವರಿಗೆ
4) ಎಲ್ಲಾ ವಿಭಾಗಿಯ ಜಂಟಿ ನಿರ್ದೇಶಕರು,ರವರುಗಳಿಗೆ

} ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸುತ್ತಾ ಈ ಬಗ್ಗೆ ನಿಮ್ಮ ಅಧೀನದ ಎಲ್ಲಾ ಅಧಿಕಾರಿ/ನೌಕರರ ಗಮನಕ್ಕೆ ಮೇಲ್ಕಂಡ ಸುತ್ತೋಲೆಯನ್ನು ಮಾಹಿತಿ/ಮುಂದಿನ ಕ್ರಮಕ್ಕೆ ಜಾರಿಮಾಡುವುದು

5) ವ್ಯವಸ್ಥಾಪಕ ನಿರ್ದೇಶಕರು ಹಾಪ್ ಕಾಮ್ಸ್, ಬೆಂಗಳೂರು
6) ವ್ಯವಸ್ಥಾಪಕ ನಿರ್ದೇಶಕರು, ಮ್ಯಾಂಗೋ ಬೋರ್ಡ್, ಎಫ್ ಬ್ಲಾಕ್ 2 ನೇ ಮಹಡಿ, ಕಾವೇರಿ ಭವನ,ಬೆಂ-09
7) ವ್ಯವಸ್ಥಾಪಕ ನಿರ್ದೇಶಕರು,ಕೆ.ಹೆಚ್.ಎಫ್,ಬಿನ್ನಿಮಿಲ್ಸ್ ಹತ್ತಿರ,ಬೆಂಗಳೂರು
8) ವ್ಯವಸ್ಥಾಪಕ ನಿರ್ದೇಶಕರು,ವೈನ್ ಬೋರ್ಡ್,ಬೆಂಗಳೂರು
9) ವ್ಯವಸ್ಥಾಪಕ ನಿರ್ದೇಶಕರು,ಕರ್ನಾಟಕ ರಾಜ್ಯ ಸಾಂಬಾರು ಅಭಿವೃದ್ಧಿ ಮಂಡಳಿ ,ಹುಬ್ಬಳ್ಳಿ
10) ತೋಟಗಾರಿಕೆ ಜಂಟಿ ನಿರ್ದೇಶಕರು (ಜಲಾನಯನ ಅಭಿವೃದ್ಧಿ ಇಲಾಖೆ), ಕಾವೇರಿ ಭವನ, ಬೆಂಗಳೂರು-09
11) ಎಲ್ಲಾ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರಿಗೆ ಕಳುಹಿಸುತ್ತಾ ನಿಮ್ಮ ಅಧೀನ/ಅಧೀನ ಕಛೇರಿಗಳ ಅಧಿಕಾರಿ/ನೌಕರರ ಗಮನಕ್ಕೆ ತರಲು ಸೂಚಿಸಿದೆ.
12) ತೋಟಗಾರಿಕೆ ಉಪ ನಿರ್ದೇಶಕರು (ತೋಮಾಕೇ) ಲಾಲ್ ಬಾಗ್ ಬೆಂಗಳೂರು
13) ಮುಖ್ಯ ಲೆಕ್ಕಾಧಿಕಾರಿಗಳು,ಲಾಲ್ ಬಾಗ್ ಬೆಂಗಳೂರು ರವರಿಗೆ
14) ಎಲ್ಲಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ರವರಿಗೆ ರವರಿಗೆ ಕಳುಹಿಸುತ್ತಾ ನಿಮ್ಮ ಅಧೀನ/ಅಧೀನ ಕಛೇರಿಗಳ ಅಧಿಕಾರಿ/ನೌಕರರ ಗಮನಕ್ಕೆ ತರಲು ಸೂಚಿಸಿದೆ.
15) ಎಲ್ಲಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿಪಂ) ರವರಿಗೆ
16) ವಿಶೇಷಾಧಿಕಾರಿಗಳು,ನಂದಿಗಿರಿಧಾಮ/ಕೃಷ್ಣರಾಜೇಂದ್ರ ಗಿರಿಧಾಮ ರವರಿಗೆ
17) ಎಲ್ಲಾ ಸಹಾಯಕ ತೋಟಗಾರಿಕೆ ಅಧಿಕಾರಿ ಗಳಿಗೆ ಸೂಕ್ತ ಮಾರ್ಗದಲ್ಲಿ
18) ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ರಾವ) ಕೃಷ್ಣರಾಜಸಾಗರ,ಮುನಿರಾಬಾದ್,ರವರಿಗೆ,
19) ಎಲ್ಲಾ ಸಹಾಯಕ ತೋಟಗಾರಿಕೆ ನಿರ್ದೇಶಕರು(ರಾವ)ರವರಿಗೆ
20) ಎಲ್ಲಾ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ರವರಿಗೆ
21) ಕಛೇರಿ ಪ್ರತಿ